**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಪ್ರಾ.ಸಾ.29**

**ಚಾ.ಸಾ. 48**

| | | |
|---|---|---|
| ಸಾಕ್ಷಿದಾರರ ಹೆಸರು | - | ಡಾ. ಉದಯ ಕುಮಾರ |
| ತಂದೆಯ ಹೆಸರು | - | ಮಹಾಬಲ ಶೆಟ್ಟಿ |
| ವಯಸ್ಸು | - | 50 ವರ್ಷ |
| ಉದ್ಯೋಗ | - | ಪಶು ವೈದ್ಯಾಧಿಕಾರಿ |
| ವಿಳಾಸ | - | ಬ್ರಹ್ಮಾವರ |

ದಿನಾಂಕಃ 10-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 2008 ನೇ ಸಾಲಿನಿಂದ 2021 ರವರೆಗೆ ಹಿರಿಯಡ್ಕ ಪಶು ಚಿಕಿತ್ಸಾಲಯದಲ್ಲಿ ಪಶು ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 16.01.2017 ರಂದು ಈ ಪ್ರಕರಣದ ತನಿಖಾಧಿಕಾರಿ ಒಂದು ಚರ್ಮವನ್ನು ಹಾಜರುಪಡಿಸಿ, ಅದು ಪ್ರಾಣಿಯ ಚರ್ಮವೇ ಎಂದು ಪರೀಕ್ಷಿಸಿ ವರದಿ ನೀಡುವಂತೆ ಕೋರಿದ್ದರು. ಸದ್ರಿ ಚರ್ಮವನ್ನು ನಾನು ಪರೀಕ್ಷಿಸಿ ಅದು ಪ್ರಾಣಿಯ ಚರ್ಮವೆಂದು ಮೇಲ್ನೋಟಕ್ಕೆ ಹೇಳಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತೇನೆ. ಸದ್ರಿ ಚರ್ಮವು ದನದ ಕರುವಿನ ಚರ್ಮವು ಎಂದು ಹೇಳಲು ತಜ್ಞರ ಪರೀಕ್ಷಗೆ ಒಳಪಡಿಸುವಂತೆ ತನಿಖಾಧಿಕಾರಿಗಳಿಗೆ ಸೂಚಿಸಿರುತ್ತೇವೆ. ಈ ಬಗ್ಗೆ ನಾನು ನೀಡಿದ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ 73 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 73(ಎ) ಎಂದು ಗುರುತಿಸಲಾಯಿತು. ಪರೀಕ್ಷೆಯ ನಂತರ ಸದ್ರಿ ಚರ್ಮವನ್ನು ತನಿಖಾಧಿಕಾರಿಯವರಿಗೆ ಹಿಂತಿರುಗಿಸಿರುತ್ತೇನೆ. ನಾನು ಪರೀಕ್ಷೆ ಮಾಡಿದ ಚರ್ಮವನ್ನು ಈಗ ನೋಡುತ್ತಿದ್ದು ಅದನ್ನು ಎಮ್ ಓ 8 ಎಂದು ಗುರುತಿಸಲಾಯಿತು.

**2 ನೇ ಆರೋಪಿಯ ಪರವಾಗಿ ಪಾಟೀ ಸವಾಲುಃ**

ಮುದ್ದೆಮಾಲು 8 ನ್ನು ಇದೇ ಪ್ರಥಮವಾಗಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಚರ್ಮವನ್ನು ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ನಿ.ಪಿ 73 ರಂತೆ ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಉಳಿದ ಆರೋಪಿತರ ಪರವಾಗಿ ಪಾಟೀ ಸವಾಲು**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.